

ಕಚೇರಿ ತಪಾಸಣೆಗಾಗಿ ಮೇಲಅಧಿಕಾರಿ ಬಂದಿದ್ದರು.
ಮ್ಯಾನೇಜರ್ ಕೇಳಿದ: 'ಏನು ತಗೋತಿರಾ ಸಾರ್.. ಬಿಸಿ ಬಿಸಿ ಕಾಫಿ?'
'ಕಾಫಿ ಬೇಡಾ'. ಸಾಹೇಬರು ಖಡಕ್ ಆಗಿ ಹೇಳಿದರು.
ಮ್ಯಾನೇಜರ್ ಮತ್ತೆ ಕೇಳಿದ 'ಗರಂ ಟೀ ತರಿಸಲೆ?'
'ಟೀ ಬೇಡಾ.'
ಮ್ಯಾನೇಜರ್: 'ವಿಸ್ಕಿ ಮತ್ತು ಸೋಡಾ ತರಿಸಲೇ ಸಾರ್?'
'ಸೋಡಾ ಬೇಡಾ!' ಮೇಲಅಧಿಕಾರಿಗಳದು ಅದೇ ಖಡಕ್ ಉತ್ತರ!

★★★



ಮಹಾ ಸೋಮಾರಿಯೊಬ್ಬ ಕೆಲಸ ಕೇಳಲು ಹೋದ.

ಕಂಪೆನಿ ಮ್ಯಾನೇಜರ್: ನಿನಗೆ ಕೊಡಲು ಸಧ್ಯಕ್ಕೆ ಯಾವುದೇ ಕೆಲಸ ನಮ್ಮಲ್ಲಿ ಇಲ್ಲ ಕಣಯ್ಯ!

ಸೋಮಾರಿ: ತುಂಬಾ ಥ್ಯಾಂಕ್ಸ್ ಸಾರ್. ಕೆಲಸ ಮಾಡಲು ನನಗೂ ಇಷ್ಟವಿಲ್ಲ! ಸಂಬಳ ಸರಿಯಾಗಿ ಕೊಟ್ಟರೆ ಸಾಕು!

ಸಂಗ್ರಹ: **ವಿಜಯಕುಮಾರ್. ಜೆ., ಹರಪನಹಳ್ಳಿ**

ಟೀಚರ್: ಶಾಂತಿ ಸಹನೆ ಯಾರಿಗೆ ಇಷ್ಟವಾಗಲ್ಲ?
ಮಕ್ಕಳು: ನಮಗೆಲ್ಲ ಇಷ್ಟವಾಗುತ್ತಾರೆ ಟೀಚರ್
ಟೀಚರ್: ಗುಂಡ, ನೀನೇಕೆ ಸುಮ್ಮನೆ ಕುಳಿತಿದ್ದಿಯಾ?
ಗುಂಡ: ನನಗೆ ಶಾಮಲಾ, ವಿಮಲಾ ಇಷ್ಟ ಟೀಚರ್.

★★★

ಟೀಚರ್: (ಶಾಲೆಯಲ್ಲಿ ಮಲಗಿದ್ದ ಗುಂಡನನ್ನು ಎಬ್ಬಿಸಿ) ನೀನು ಶಾಲೆಗೆ ಯಾವುದಕ್ಕಾಗಿ ಬರುತ್ತೀಯಾ?
ಗುಂಡ: ವಿದ್ಯಗಾಗಿ ಟೀಚರ್.
ಟೀಚರ್: ಮತ್ತೆ ಪಾಠ ಕೇಳೋದ ಬಿಟ್ಟು ನೀನು ಮಲಗಿದ್ದಿಯಲ್ಲ?
ಗುಂಡ: ಇವತ್ತು ವಿದ್ಯಾ ಬಂದಿಲ್ಲ, ಅದಕ್ಕ ಮಲಗಿದ್ದೀನಿ ಟೀಚರ್!

★★★

ಸುರೇಶ: ಡಾಕ್ಟರೇ ನನ್ನ ಮಗ ಪೆನ್ನು ನುಂಗಿಬಿಟ್ಟಿದಾನೆ ಏನ್ಮಾಡೋದು?
ಡಾಕ್ಟರ್: ನನಗದು ಸಿಗುವವರೆಗೂ ಈ ಪೆನ್ಸಿಲ್ ತೆಗೆದುಕೊಳ್ಳಿ.

★★★



ತಾಯಿ: ವೆಂಕಿ ನಾನು ಪಕ್ಕದ ಮನೆ ಲಕ್ಷ್ಮಿ ಜೊತೆ ಸಿನಿಮಾ ನೋಡೋಕೆ ಹೋಗುತ್ತೇನೆ.

ವೆಂಕಿ: ಆಯ್ತು ಅಮ್ಮಾ ಹೋಗಿ ಬಾ.

ತಾಯಿ: ನಿಮ್ಮ ಅಪ್ಪ ಬಂದು ಕೇಳಿದ್ರೆ ಸಿನಿಮಾಕ್ಕೆ ಹೋದೆ ಅಂತ ಹೇಳಬೇಡ.

ವೆಂಕಿ: ಇಲ್ಲಾ ಅಮ್ಮಾ ಹೇಳೋದಿಲ್ಲ. ಅಪ್ಪ ಪಕ್ಕದ ಮನೆ ಆಂಟಿ ಜೊತೆ ಸಿನಿಮಾಕ್ಕೆ ಹೋದಾಗ ಎಂದಾದ್ರೂ ನಿಂಗೆ ಹೇಳಿದ್ದೀನಾ?

ಸಂಗ್ರಹ: **ಜಗದೀಶ ಎಂ. ಸಂಗಣ್ಣವರ, ಬೆಳಗಾವಿ**



